ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

(ಅ) ಉಪಾಧ್ಯಾಯರುಗಳ ಹಾಗೂ ವಿದ್ಯಾರ್ಥಿಗಳ ಮೇಲೆ ಹೂಡಿರುವ ಯಾವುದೇ ದಂಡ ಪ್ರಕರಣ ಮೊಕದ್ದಮೆಗಳು ಸರಕಾರದ ಗಮನಕ್ಕೆ ಬಂದಿಲ್ಲ.

(ಆ) ಮೇಲಿನ 'ಅ' ಪ್ರಶ್ನೆಯ ಉತ್ತರ ಗಮನಿಸಿದಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

(ಇ) ನ್ಯೂನತೆಗಳ ಬಗ್ಗೆ ತನಿಖೆ ಮಾಡಲಾಗುತ್ತಿದೆ. ತನಿಖೆಯ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಟಿ. ಹೆಚ್. ಹನುಮಂತರಾಯಪ್ಪ.—ಮಾನ್ಯ ಅಧ್ಯಕ್ಷರೇ, ಒಂದು ವರ್ಷದ ಹಿಂದೆ ಚೇಳೂರಿನಲ್ಲಿ, ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳು ಸಂಸ್ಥೆಯ ಮೇಲೆ ದೊಡ್ಡ ಗಲಾಟೆ ಮಾಡಿದರು. ಅವತ್ತಿನ ದಿವಸ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಯವರ ಮೋಟಾರ್ ಸೈಕಲನ್ನು ಸುಟ್ಟು ಹಾಕಿದ್ದಾರೆ, ಬಿಲ್ಡಿಂಗ್‌ಗೆ ಜಖಿಮ್ ಆಗಿದೆ. ಇದರ ಮೇಲೆ ೫–೬ ಮೊಕದ್ದಮೆಗಳನ್ನು ಹೂಡಿದ್ದು, ಉಪಾಧ್ಯಾಯರೆಲ್ಲ ಕೋರ್ಟಿಗೆ ತಿರುಗುತ್ತಿದ್ದಾರೆ. ಮಾನ್ಯ ಸಚಿವರು ಈ ರೀತಿ ಸತ್ಯಕ್ಕೆ ದೂರವಾದ ಉತ್ತರ ಕೊಡತಕ್ಕದ್ದು ವಿಹಿತವಲ್ಲವೆಂದು ತಮ್ಮ ಮೂಲಕ ಹೇಳುತ್ತಿದ್ದೇನೆ.

ಶ್ರೀ ಬಿ. ರಾಚಯ್ಯ.—ಯಾವುದೇ ಕ್ರಿಮಿನಲ್ ಕೇಸ್ ಹಾಕಿರತಕ್ಕದ್ದು ನನ್ನ ಗಮನಕ್ಕೆ ಬಂದಿಲ್ಲವೆಂದು ಹೇಳಿದ್ದೇನೆ. ಆದರೆ ಅಲ್ಲಿನ ಉಪಾಧ್ಯಾಯರುಗಳಾದ ಶ್ರೀ ರಂಗನಾಥ್ ಮತ್ತು ಶ್ರೀ ಎ. ಆರ್. ವಿಜಯಾನಂದ ಶರ್ಮ ಎಂಬುವರು ತಮ್ಮ ಸ್ಥಳಗಳಿಗೆ ಬೇರೆ ಅಭ್ಯರ್ಥಿಗಳನ್ನು ನೇಮಿಸಿಕೊಳ್ಳಕೂಡದು ಎಂದು ಕೋರ್ಟಿನಿಂದ ಸ್ಟೇ ಆರ್ಡರ್ ತಂದಿದ್ದಾರೆ. ಅದು ನನ್ನ ಗಮನಕ್ಕೆ ಬಂದಿದೆ.

ಶ್ರೀ ಟಿ. ಹೆಚ್. ಹನುಮಂತರಾಯಪ್ಪ.—ಕೋರ್ಟಿನಲ್ಲಿ ಕೇಸ್‌ಗಳು ನಡೆಯುತ್ತಿವೆ.

ಸಭಾಧ್ಯಕ್ಷರು.—ಶಿಕ್ಷಣ ಸಂಸ್ಥೆಯವರು ಹಾಕಿರುವ ಕೇಸುಗಳು ನಡೆಯುತ್ತಿವೆ ಎಂದು ಹೇಳುತ್ತಿದ್ದಾರೆ.

ಹಾನಗಲ್ ತಾಲ್ಲೂಕಿನಲ್ಲಿ ಗ್ರಾಮಾಂತರ ನೀರು ಸರಬರಾಜು ಯೋಜನೆ

೪೩೬ (೯೩೨) ಶ್ರೀ ಸಿ. ಎಮ್. ಉದಾಸಿ (ಹಾನ್‌ಗಲ್).—ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ಹಾನಗಲ್ ತಾಲ್ಲೂಕಿನಲ್ಲಿ ಗ್ರಾಮಾಂತರ ನೀರು ಪೂರೈಕೆ ಯೋಜನೆಯಲ್ಲಿ ಎಷ್ಟು ಗ್ರಾಮಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರದವರ ವಲಯದಲ್ಲಿ ತೆಗೆದುಕೊಳ್ಳಲಾಗಿದೆ,

(ಆ) ಆ ರೀತಿ ತೆಗೆದುಕೊಂಡ ಗ್ರಾಮಗಳಲ್ಲಿ ಕೆಲಸ ಯಾವ ಹಂತಗಳಲ್ಲಿ ಇರುತ್ತವೆ (ಗ್ರಾಮವಾರು ವಿವರಗಳನ್ನು ತಿಳಿಸುವುದು) ಈ ಯೋಜನೆಯನ್ನು ಪೂರೈಸಲು ಎಷ್ಟು ಅವಧಿ ಬೇಕಾಗುವುದು ?

(ಇ) ಹಾನಗಲ್ ತಾಲ್ಲೂಕನ್ನು ಬರಗಾಲ ಪೀಡಿತ ಪ್ರದೇಶಾಭಿವೃದ್ಧಿ ಕಾರ್ಯಕ್ರಮಗಳ ಯೋಜನೆಯಲ್ಲಿ ಸೇರಿಸುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ,

(ಈ) ಹಾನಗಲ್ ತಾಲ್ಲೂಕಿನ ಪೂರ್ವ ಭಾಗದ ೬೩ ಹಳ್ಳಿಗಳು ಪ್ರತಿ ೨ ವರ್ಷಕ್ಕೊಮ್ಮೆ ಬರಗಾಲಕ್ಕೊಳಗಾಗುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು).—

(ಅ) ರಾಜ್ಯ ಘಟಕದಲ್ಲಿ ೧೩ ಯೋಜನೆಗಳು ಹಾಗೂ ಕೇಂದ್ರ ಘಟಕದಲ್ಲಿ ೩ ಯೋಜನೆಗಳನ್ನು ತೆಗೆದುಕೊಳ್ಳಲಾಗಿದೆ.

(ಆ) ವಿವರಗಳಿಗೆ ಪಟ್ಟಿ ಲಗತ್ತಿಸಿದೆ.

(ಇ) ಹಾನಗಲ್ ತಾಲ್ಲೂಕನ್ನು ಬರಗಾಲ ಪೀಡಿತ ಪ್ರದೇಶಾಭಿವೃದ್ಧಿ ಕಾರ್ಯಕ್ರಮಗಳ ಯೋಜನೆಯಲ್ಲಿ ಸೇರಿಸುವ ಪ್ರಸ್ತಾಪವು ಸರ್ಕಾರದ ಪರಿಶೀಲನೆಯಲ್ಲಿದೆ.

(ಈ) ಹೌದು.

STATEMENT SHOWING THE STAGES OF WATER SUPPLY SCHEMES TAKEN UP UNDER STATE AND CENTRAL SECTORS IN HANGAL TALUK

Sl. No.	Name of Scheme	Name of Village	Year of Approval	Year of sanction	Estd., Amount (Rs. in lakhs)	Expdr. upto 31-3-1983	Present Stage	Amount required for completion	Budgt. Provn. during 83-84	Probble Expdr. during 83-84 if f nds released	Bud. provn. proposed during 84-85	Probable Date of completion
1	2	3	4	5	6	7	8	9	10	11	12	13
1	Central	Akki Alur (original)	63-64	65-66	3.26	3.96	Completed Commissioned and handed-over.					
2	do	Herur (original)	70-71	71-72	1.10	1.51						
3	State	Kudla	78-79	78-79	0.33	0.37						
4	do	Adur	78-79	78-79	1.47	1.37	Completed Commissioned and handed-over.					
5	do	Baichavalli Aladakatti	78-79	79-80	0 70	1.00		0.04	0.01	0.03	0.01	
		Belgalpet	79-80	79-80	2.87	2.86		0.03	0.01	0.02	0.01	
6	do	Akkivalli	81-82	81-82	1.52	0.64		0.71	0.01	0.70	0.01	
		B. DIRECTLY COMMISSIONED BUT NOT COMPLETED										
1	do	Bommenahalli	78-79	78-79	3.84	3.40	ESR half done, for balanced work agency is fixed. work not started.	0.90	0.10	0.80	0.10	4/84
					4.20							

1	2	3	4	5	6	7	8	9	10	11	12	13
2	do	Tilwalli	78-79	78-79	3.50 —— 4.51	3.59	ESR come upto side wall level. Agency for bal. work to be fixed.	0.92	0.01	0.02	0.90	11/84
3	do	Allo-Alur	79-80	79-80	2.20 —— 2.81	1.96	ESR has been taken up departmentally.	0.89	0.01	0.50	0.39	85/86
4	do	Naregal	80-81	81-82	2.43 —— 2.49	1.38	Agency fixed for ESR just started.	1.12	0.30	0.40	0.71	5/84
5	do	Savasgi	81-82	81-82	1.44	0.45	ESR has come up to done level.	0.75	0.01	0.70	0.05	85/86
					C. OTHER SCHEMES							
1	State	Kelvarkop	81-82	82-83	1.68	0.40	GSR in Progress Dist. completed PH and RM to be done.	1.13	0.20	1.12	0.01	85/86
2	do	Herur (Aug)	82-83	83-84	1.36	—	All works except ESR completed Agency for ESR is fixed.	2.95	0.01	0.01	0.01	85/86
3	do	Kusur	81-82	83-84	3.35	0.40	Agency fixed not started.	1.36 2.95	0.05	0.01	0.05	85/86
4	Central	Balambeed	81-82	83-84	2.90	0.90	ESR work is in progress. Other works are to be started.	2.81	1.25	1.79	0.97	85/86

ಶ್ರೀ ಪಿ. ಎಂ ಉದಾಸಿ.—ಮಾನ್ಯ ಅಧ್ಯಕ್ಷರೇ ೧೯೭೮–೭೯ರಲ್ಲಿ ಐದು ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಬೊಮ್ಮನಹಳ್ಳಿ ಮತ್ತು ತಿಳವಳ್ಳಿ ಗ್ರಾಮಗಳಲ್ಲಿ ಪ್ರಾರಂಭವಾದ ನಳದ ಯೋಜನೆಗಳು ಇದುವರೆಗೆ ಮುಗಿದಿಲ್ಲ. ಎಷ್ಟು ದಿವಸದಲ್ಲಿ ಇದನ್ನು ಮುಗಿಸುತ್ತೀರಿ ? ಹಾನಗಲ್ ತಾಲೂಕನ್ನು ಬರಗಾಲ ಪೀಡಿತ ಪ್ರದೇಶ ಎಂದು ಘೋಷಿಸುವ ಸಲುವಾಗಿ ಪರಿಶೀಲನೆಯಲ್ಲಿದೆ ಎಂದು ಎರಡು ವರ್ಷದಿಂದ ಹೇಳುತ್ತಿದ್ದೀರಿ. ೧೯೮೪–೮೫ ರಲ್ಲಾದರೂ ಇದನ್ನು ಬರಗಾಲ ಪೀಡಿತ ಪ್ರದೇಶ ಯೋಜನೆಯಲ್ಲಿ ಸೇರಿಸುತ್ತೀರಾ ?

ಶ್ರೀ ಅಬ್ದುಲ್‌ನಜೀರ್‌ಸಾಬ್.—ಮಾನ್ಯ ಸಭಾಧ್ಯಕ್ಷರೇ, ೧೬ ಕುಡಿಯುವ ನೀರಿನ ನಳದ ಯೋಜನೆಗಳು ಬಿನಿವೆ, ಅದರಲ್ಲಿ ಎರಡು ಮಾತ್ರ ಮುಗಿದಿಲ್ಲ. ಹಾನಗಲ್ ತಾಲ್ಲೂಕನ್ನು ಬರಗಾಲ ಪೀಡಿತ ಪ್ರದೇಶ ಎಂದು ಡಿ.ಪಿ.ಎ.ಪಿ. ಯೋಜನೆಗೆ ಸೇರಿಸಬೇಕೆಂದು ಅವರು ಹೇಳಿದ್ದಾರೆ. ಆದರೆ ಅದಕ್ಕೆ ಕೇಂದ್ರ ಸರಕಾರದ ಕೆಲವು ಗೈಡ್‌ಲೈನ್ಸ್ ಇದೆ, ಅಲ್ಲಿಂದ ಸ್ವಡಿ ಟೀಮ್ ಬಂದು ಇಂತಹದ್ದನ್ನೇ ಸೇರಿಸಬೇಕೆಂದು ರೆಕಮೆಂಡೇಷನ್ ಮಾಡುತ್ತಾರೆ. ಕೇಂದ್ರದ ಯೋಜನೆ ವಲಯದಲ್ಲಿ ಸೇರಿಸುವುದನ್ನು ಅವರು ಸೇರಿಸುತ್ತಾರೆ ಇನ್ನು ರಾಜ್ಯ ವಲಯದಲ್ಲಿ ಈ ಕಾರ್ಯಕ್ರಮ ವಿಸ್ತರಿಸುವುದನ್ನು ಮುಂದಿನ ವರ್ಷ ಪರಿಶೀಲನೆ ಮಾಡುತ್ತೇವೆ.

ಕೃಷಿ ಇಲಾಖೆಯಲ್ಲಿರುವ ಕೃಷಿ ವಿಸ್ತರಣಾಧಿಕಾರಿಗಳು

೪೩೭ (ಆರ್) ಶ್ರೀ ಎಂ. ಮಹಾದೇವ್ (ನಂಜನಗೂಡು) ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ೧೯೫೯ ರಲ್ಲಿ ಕೃಷಿ ಇಲಾಖೆಯಲ್ಲಿ ನೇಮಕಗೊಂಡ ಗ್ರಾಮಸೇವಕರನ್ನು ೧೯೭೦ರವರೆಗೆ ಅಭಿವೃದ್ಧಿ ಇಲಾಖೆಗೆ ವರ್ಗಮಾಡಿ ಪುನಃ ಅವರನ್ನು ಕೃಷಿ ಇಲಾಖೆಗೆ ಕೃಷಿ ವಿಸ್ತರಣಾಧಿಕಾರಿಗಳೆಂದು ನೇಮಕ ಮಾಡಿರುವುದು ವಾಸ್ತವಾಂಶವಲ್ಲವೇ;

ಆ) ಹಾಗಿದ್ದಲ್ಲಿ, ೧೯೫೯–೭೦ ರಿಂದ ಅಭಿವೃದ್ಧಿ ಇಲಾಖೆಯಲ್ಲಿ ಸೇವೆಸಲ್ಲಿಸಿದ ಈ ಗ್ರಾಮ ಸೇವಕರ ಜೇಷ್ಠತೆಯನ್ನು ಸಹಾಯಕ ಕೃಷಿ ನಿರ್ದೇಶಕರಾಗಿ ಬಡ್ತಿ ನೀಡಲು ಪರಿಗಣಿಸಲಾಗಿದೆಯೇ ;

ಇ) ಹಾಗಿಲ್ಲದಿದ್ದಲ್ಲಿ ೧೯೫೯ ರಿಂದ ಅವರ ಜೇಷ್ಠತೆಗೆ ರಕ್ಷಣೆ ನೀಡಿ ಅವರನ್ನು ಸಹಾಯಕ ಕೃಷಿ ನಿರ್ದೇಶಕರಾಗಿ ಬಡ್ತಿ ನೀಡಲು ಅವರ ಅಹವಾಲನ್ನು ಗಣನೆಗೆ ತೆಗೆದುಕೊಂಡು ಸರ್ಕಾರ ಪರ್ಯಾಲೋಚಿಸುವುದೇ ?

ಶ್ರೀ ಎಸ್. ರೇವಣ್ಣ (ಕೃಷಿ ರಾಜ್ಯ ಸಚಿವರು).

ಅ) ಗ್ರಾಮಸೇವಕರು ಕೃಷಿ ಇಲಾಖೆಯಲ್ಲಿ ನೇಮಕಗೊಂಡಿಲ್ಲ, ಆದರೆ ಅಭಿವೃದ್ಧಿ ಇಲಾಖೆಯಲ್ಲಿ ನೇಮಕಗೊಂಡಿರುವರು.

ಆ) ಪರಿಗಣಿಸಲಾಗುವುದು

ಇ) ಪರಿಗಣಿಸಲಾಗುವುದು

೧೦–೦೦ ಎ.ಎಂ.

ಶ್ರೀ ಎಂ. ಮಹದೇವ್.—ಮಾನ್ಯ ಮಂತ್ರಿಯವರು ಕೃಷಿ ಇಲಾಖೆಯಲ್ಲಿ ನೇಮಿಸಿಕೊಂಡಿಲ್ಲ ವೆಂದು ಹೇಳಿದ್ದಾರೆ. ಕೃಷಿ ಇಲಾಖೆಯ ಮನವಿ ಮೇರೆಗೆ ಸುಮಾರು ೩೬ ಜನರನ್ನು ಆರ್.ಡಿ.ಸಿ. ಇಲಾಖೆಯಿಂದ ಕಳುಹಿಸಿದ್ದಾರೆ. ಅವರಿಗೆ ಸುಮಾರು ೧೨ ವರ್ಷ ಸರ್ವೀಸ್ ಆಗಿದೆ. ಇಲ್ಲಿಯವರೆವಿಗೂ ಅವರಿಗೆ ಯಾವುದೆ ರೀತಿಯ ಬಡ್ತಿಯನ್ನು ಕೊಟ್ಟಿಲ್ಲ. ಹೊಸದಾಗಿ ನೇಮಕ ಮಾಡಿಕೊಂಡಿರುವವರಿಗೆ ಬಡ್ತಿ ಸಿಗುತ್ತಿದೆ. ಕೂಡಲೇ ಇದರ ಬಗ್ಗೆ ಕ್ರಮ ತೆಗೆದುಕೊಂಡು ಸರಿಪಡಿಸುತ್ತೀರಾ ?